ಹಾಸನ ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 29ನೆ ಆಗಸ್ಟು 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಹಾಸನದ ತಾಲ್ಲೂಕು ಗಾ‍್ರಮದ ಹೋಬಳಿ ಹಲಸಿನಹಳ್ಳಿ ಗಾ‍್ರಮದ ಒರಾಟು ಕೆಂಗಟ್ಟೆ ತಲಾವಿನ ವಳಾಯದಲ್ಲಿ ಅದೇ ಗಾ‍್ರಮದ ನಂಜಿ ಎಂಬವಳಿಗೆ ಶಿಕ್ಕಿದ 1—9—0 ರೂಪಾಯಿ ಜಲೆ ಬಾಳುವ ಕಂಠಿರಾಯಿ ಹಣಗಳು ೫, ತಾಲ್ಲೂಕು ಖಜಾನೆಯಲ್ಲಿ ಇಡಿಸಲ್ಪಟ್ಟಿರುತ್ತೆ. ಸದರಿ ಮೊಲಿಗೆ ವಾರಸುದಾರು ಯಾರಾದರೂ ಇದ್ದರೆ ಈ ತಾರೀಖು ಲಾಗಾಯಿತು ಆರು ತಿಂಗಳವರೆಗಾಗಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟು ಟ್ರೈಜರಿ ಅಸಿಸ್ಟೆಂಟ್ ಕಮಿಷನರವರ ಮುಂದೆ ಹಾಜರಾಗಿ ತಮ್ಮದೆಂಬುವದನ್ನು ದೃಢಪಡಿಸಿಕೊಡಬೇಕು. ಹಾಗೆ ವಾಯಿದೆಲಿ ಹಾಜರಾಗದೆಯೂ ದೃಢಪಡಿಸಿಕೊಡದೇಲೂ ತಪ್ಪಿಹೋಗುವ ಭಾಗದಲ್ಲಿ ಸದರಿ ಮೂಲನ್ನು ಗೌರ್ನಮೆಂಟ್ 1867ನೆ ಇಸವಿ ಮೇ ತಾರೀಖು 4ರ ಮುಕ್ರಂ 6ನೆ ನಂಬರು ನೋಟಿಫಿಕೇಷನ್ ಪ್ರಕಾರ ಯುಕ್ತವರಿತು ಕ್ರಮ ಜರಿಗಿಸುವದರಲ್ಲಿ ಬರುತ್ತೆ.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟ್ ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಮಿಸಲೇನಿಯಸ್ ನಂಬರು 104.

ಹಾಸನ ಕಸಬಾದಲ್ಲಿ ಇದ್ದು ಫವತಿಪಟ್ಟ ನಾಗಪ್ಪ ಶೆಟ್ಟರ ಧರಣ್ಯೆಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಹಾಸನ ಕಸಬಾದಲ್ಲರುವ 1ನೆ ನಾಗರಾಜೈಯ್ಯ, 2ನೆ ಜಿಯಪ್ಪ, ಮೈನರ್, ಗಾರ್ಡಿಯರ್ ಚಿಕ್ಕಪ್ಪ ಶೀನಪ್ಪ 3ನೆ ಶೀನಪ್ಪನು, ಫವತಿಪಟ್ಟ ಧರಣ್ಯೆಯ್ಯನವರಿಗೆ 1—2ನೆ ಅರ್ಜೀದಾರು ಖಾಸಾ ಮಕ್ಕಳಾಗಬೇಕೆಂದುನ್ನು 3ನೆ ಅರ್ಜೀದಾರನು ಅವಿಭಕ್ತ ಸಹೋದರನಾಗಬೇಕೆಂಬ ಹಕ್ಕುದಾರಿ ಮೇಲೆ ಫವತಿಪಟ್ಟ ಧರಣ್ಯೆಯ್ಯನವರಿಗೆ ಬರತಕ್ಕ 1,198—7—11 ಪೈ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ VIIನೆ ರೆಗ್ಯುಲೇಷನ್ ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ಅರ್ಜೀದಾರ್ ನಾಗರಾಜೈಯ್ಯ ವಗೈರೇರ ಅರ್ಜಿಯನ್ನು ಸ್ ೧೯೦೩ನೆ ಇಸವಿ ಅಕ್ಟೋಬರ್ ತಿಂಗಳು 10ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಫವತಿಪಟ್ಟ ಧರಣ್ಯೆಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೆ ಇಸವಿ ಸೆಪ್ಟಂಬರ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಬಿ. ಕೇಪಗಿರಿರಾವ್, ಸಬ್ ಜಡ್ಜ್.

ಚಿಕ್ಕಮುಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ ೧೯೦೩—೧೯೦೪ನೆ ಇಸವಿ ಅರ್ಜಿ ನಂಬರ್ 61.

ಮೃತಪಟ್ಟ ಸಕ್ಕೆ ಮಂಜೈಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕಡೂರು ಡಿಸ್ಟ್ರಿಕ್ಟ್ ಚಿಕ್ಕಮುಗಳೂರಿನಲ್ಲಿರುವ 1ನೆ ಸಕ್ಕಪ್ಪಶೆಟ್ಟಿ, 2ನೆ ಲಿಂಗಪ್ಪ, 3ನೆ ವೆಂಕಟಕ್ರಿಷ್ಣಯ್ಯ, 4ನೆ ಮೈಲಾರಪ್ಪ, 5ನೆ ರಾಮೈಯ್ಯ, 6ನೆ ಲಕ್ಷ್ಮಣ್ಣ, 7ನೆ ನಾರಣೈಯ್ಯ, 3-4-5-6-7ನೆ ಅರ್ಜಿದಾರ್ರುಗಳು ಮೈನರ್, ಗಾರ್ಡಿಯರ್ 1ನೆ ಅರ್ಜೀದಾರ ಸಕ್ಕಪ್ಪಶೆಟ್ಟಿ, ಮೃತಪಟ್ಟ ಸಕ್ಕೆ ಮಂಜೈಯ್ಯನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಕಡೂರು ಡಿಸ್ಟ್ರಿಕ್ಟ್ ಚಿಕ್ಕಮುಗಳೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ಸಕ್ಕೆ ಮಂಜೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಸಕ್ಕಪ್ಪಶೆಟ್ಟಿ, ಲಿಂಗಪ್ಪಶೆಟ್ಟಿಯವರ ಅರ್ಜಿಯನ್ನು ಸ್ ೧೯೦೩ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಕ್ಕೆ ಮಂಜೈಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ ೧೯೦೩ನೆ ಇಸವಿ ಆಗಸ್ಟು 31ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಪರಮೇಶ್ವರ ಅಯ್ಯರ್,
ಸಬ್ ಜಡ್ಜ್.

ಸ್ವಂತ ಪ್ರಕಟನೆ.

ಚಿಕ್ಕಮಗಳೂರಲ್ಲಿ ಇದ್ದು ಮೃತಪಟ್ಟ ಮಳವಳ್ಳಿ ಗಾಣಿಗರ ಪುಟ್ಟಶ್ಯಾಮಯ್ಯನವರ ಮಗ ಗೌಂಡಯ್ಯನಾದ ನಾನು ಇದರಿಂದ ಸಮಸ್ತ ಜನರಿಗೂ ತಿಳಿಸುವದೇನಂದರೆ—

ನನ್ನ ತಂದೆ ಮೃತಪಟ್ಟ ಪುಟ್ಟಶ್ಯಾಮೈಯ್ಯನವರ ಖಾಬತು ಚಿಕ್ಕಮಗಳೂರಲ್ಲಿ ಇರುವ ಅಂಗಡಿ ಮನೆ ಮತ್ತು ದಸ್ತೈವಜು ಯಾ ಕೋರ್ಟು ಡಿಕ್ರಿಗಳನ್ನು ಸಹಾ ಇವರ ರಕಾವದಾರಳು ಮಲ್ಲಮ್ಮನೆಂಬವಳು ಮನೆ ಕ್ರಯ ಮಾಡುವದಾಗಿ ದಸ್ತೈವಜು ಯಾ ಡಿಕ್ರಿ ಹಣಾ ವಸೂಲು ಮಾಡುವದಾಗಿಯೂ ತರದೂದು ಮಾಡುವದಾಗಿ ತಿಳಿಯಬರುತ್ತೆ. ಈ ಸ್ವತ್ತಿನ ಮೇಲೆ ಯಾವ ಹಕ್ಕೂ ಇಲ್ಲದ ಮಲ್ಲಮ್ಮನಿಂದ ಮಾಡಿಕೊಂಡ ಕ್ರಯಾಧಾರ ಭೋಗ್ಯವು ಇತರ ಕರಾರು ಮತ್ತು ಹಣ ಸಂದ ರಸೀತಿಗಳು ಸಹಾ ಅಸ್ಸಿಂಧುವಾದ್ದೆಂದು ಭಾವಿಸತಕ್ಕದ್ದಲ್ಲದೆ ಇದಕ್ಕೆ ವಿರೋಧವಾಗಿ ಪಡದವರು ನನ್ನ ಡಾವಿಜಿಗೂ ಗುರಿಯಾಗುತ್ತಾರೆ.

ಗುಂಜೈನ ರುಜು.

Mysore Govt. Central Press, Bangalore.—1903.